ಆತ ಗೋರಿಯೊಂದರ ತೊಡೆಗೆ ಆನಿಕೊಂಡು ಕುಳಿತ. ಎದುರಿಗೆ ಎಳೆಬಿಸಿಲಿನಲ್ಲಿ ನಿಂಬೆ ಬಣ್ಣದ ಸಲ್ವಾರ್ ಕಮೀಜು ತೊಟ್ಟ ಆಕೆ ತನ್ನ ಪಲ್ಲೂವನ್ನು ನೆತ್ತಿಗೆಳೆದುಕೊಂಡು ಅವನ ಮುಂದೆ ಕಾಲು ಮಡಚಿ ಕುಳಿತಳು. ಇಬ್ಬರ ಕಣ್ಣಲ್ಲೂ ರಾತ್ರಿ ಕೆಟ್ಟ ನಿದ್ದೆಯ ಕೆನೆ ಕೆಂಪಗೆ ತೇಲುತ್ತಿತ್ತು.

'ನೀನು ದೇವರನ್ನು ನಂಬುತ್ತೀಯಾ?' ಆತ ಕೇಳಿದ.

'ನಿನ್ನನ್ನು ನಂಬುತ್ತೇನೆ' ಉತ್ತರಿಸಿದಳು.

'ನನ್ನನ್ನು ಎಷ್ಟು ದಿನಾಂತ ಪ್ರೀತಿಸ್ತೀಯ?' ಕೇಳಿದ.

'ಇವತ್ತಿನ ಈ ಕ್ಷಣ... ಇದು ನಮ್ಮಿಬ್ಬರದು. ಎಷ್ಟು ದಿನಾಂತ ಬದುಕಿರ್ತೇವೆ? ಇವತ್ತು ಪ್ರೀತಿಸ್ತೇನೆ, ಪ್ರೀತಿಸ್ತಿದ್ದೇನೆ. ಗಂಡನ ಘೋಕರಿಕೆಗೆ, ಅಡಿಗೆ ಮನೆಯಲ್ಲಿ ಮರೆತುಬಿಟ್ಟು ಬಂದ ಹಾಲು ಬೆಕ್ಕಿನ ಪಾಲಾಗುವ ಭೀತಿಗೆ, ಶಾಲೆಗೆ ಹೋದ ಮಗು ತಡವಾಗಿ ಬಂದದ್ದೇಕೆಂಬ ಆತಂಕಕ್ಕೆ, ಲೆಕ್ಕ ಸರಿಯಾಗಿದ್ದಿದ್ದರೆ ಈವತ್ತಿಗೆ ನೀರಾಗಿ ಮೂರು ದಿನವಾಗಬೇಕಿತ್ತೆಂಬ ತರ್ಕಕ್ಕೆ, ಪಕ್ಕದ ಮನೆಯ ಗಂಡಸಿನ ದಿಟ್ಟಿಸುವಿಕೆಯಲ್ಲಿರುವುದು ಪ್ರೀತಿಯೋ, ಅನುಕಂಪವೋ, ಮಧ್ಯಾಹ್ನದ ಕಾಮವೋ ಎಂಬ ಪ್ರಶ್ನೆಗೆ ಸಿಕ್ಕು ತತ್ತರಿಸದೆ... ಈ ಕ್ಷಣದಲ್ಲಿ ಹೀಗೆ ನಿನ್ನ ಮುಂದೆ ಕುಳಿತು ಸುಮ್ಮನೆ ಪ್ರೀತಿಸುತ್ತೇನೆ. ಸಾಕಲ್ಲ ಅಷ್ಟು? ಪ್ರಶ್ನೆ ಕೇಳಬೇಡ.' ಅವಳು ಈ ಜನ್ಮಕ್ಕಿಷ್ಟೇ ಮಾತು ಸಾಕು ಎಂಬಂತೆ ಥಟ್ಟನೆ ಸುಮ್ಮನಾದಳು.

ಎದ್ದು, ಮತ್ತೊಂದು ಮಿನಾರಿನತ್ತ ಹೆಜ್ಜೆ ಹಾಕಿದರು. ಆ ಊರೇ ಹಾಗೆ, ಎತ್ತ ತಿರುಗಿದರೂ ಮಿನಾರು, ಮಸೀದಿ ಕಮಾನು, ಗೋರಿ! ಏನಿಲ್ಲವೆಂದರೂ ಕನಿಷ್ಠ ಮೂರು ಸಾವಿರ ಗೋರಿಗಳಿವೆ. ಸುಲ್ತಾನರಿಂದ ಹಿಡಿದು ಸೂಳೆಯರ ತನಕ, ಸೂಫಿಗಳಿಂದ ಹಿಡಿದು ಸುಬೇದಾರರ ತನಕ... ಯಾವ ಗೋರಿಯ ಕೆಳಗೆ ಯಾವ ಜೀವ ಮಲಗಿದೆಯೋ? ಒಂದೊಂದೇ ಗೋರಿ ತಾಗುತ್ತ, ತಡವುತ್ತ, ದಾಟುತ್ತ ಮಧ್ಯಾಹ್ನದ ಹೊತ್ತಿಗೆ ಅವರಿಬ್ಬರೂ ಊರಾಚೆಯ ಶಿಥಿಲವೊಂದರ ಬಳಿಗೆ ಬಂದು ಕುಳಿತಿದ್ದರು. ಶಿಥಿಲ ತಣ್ಣಗಿತ್ತು, ಪ್ರೀತಿಯಂತೆ ಎತ್ತರವಾಗಿತ್ತು. ಸುಮ್ಮನಿತ್ತು. ಐದು ವರ್ಷಗಳ ಹಿಂದೆ ಯಾವ ದೊರೆಯ ಕಂದ ಕಾಲಿಗೆ ಬೆಳ್ಳಿ ಕಡಗವಿಕ್ಕಿಕೊಂಡು ಈ ಬಂಗಲೆಯ ತುಂಬೆಲ್ಲ ಆಡಿದ್ದನೋ? ಯಾವ ಸವತಿ ಅವನ ಗಲ್ಲಕ್ಕೆ ಕೇರು ಬಳಿದು ಮುಂದಿನ ತಿಂಗಳು ಬಸಿರು ನಿಂತೀತೆಂದು ಕಳವಳಿಸಿ ಕಾದಿದ್ದಳೋ? ಯಾವ ಗೋಡೆಯ ಬಿರುಸಿಗೆ ಬಡಿದ ನಾಚ್‌ವಾಲಿಯ ಹಣೆಯೊಡೆದು ನೆತ್ತರು ಛಲ್ಲೆಂದು ಸಿಡಿದಿತ್ತೋ? ಈಗ ಮಾತ್ರ ಶಿಥಿಲ ಮೌನವಾಗಿತ್ತು.

'ನಿನ್ನ ಗಂಡ ಬಡಿಯುತ್ತಾನಾ?' ಅವನು ಕೇಳಿದ.

'ಇಲ್ಲ, ಆತ ಒಳ್ಳೆಯವನು. ನಾಗರಿಕ ಮನುಷ್ಯ. ಆದರೆ ಹೆದರಿಕೆಯಾಗುವಷ್ಟು ಸುಮ್ಮನಿರುತ್ತಾನೆ. ಪ್ರೀತಿ ಮಾಡುವಾಗಲೂ!... ಕೈ ಹಿಡಿದುಕೊಂಡರೆ ಹಾವು ಮುಟ್ಟಿದಂತಾಗುತ್ತದೆ. ಮೈಮೇಲೆ ಕಾಲು ಬಿದ್ದರೆ ಸಾವಿನಷ್ಟು ಭಾರವೆನಿಸುತ್ತದೆ. ಆತ ಹೊಡೆಯುವುದಿಲ್ಲ ದಿಟ್ಟಿಸುತ್ತಾನೆ. ನಿದ್ದೆ ಮಾಡುವ ನನ್ನನ್ನೇ ನೋಡುತ್ತ ಕೂತುಬಿಡುತ್ತಾನೆ. ಸ್ನಾನಕ್ಕೆ ಹೋದಾಗ ಹಿತ್ತಲಲ್ಲಿ ಒಬ್ಬನೇ ನಿಂತು ಕಾಯುತ್ತಾನೆ. ಹಾಡುತ್ತ ಕೂತಾಗ ಶಾಯಿಯ ಕುಡಿಕೆಯಲ್ಲಿ ಒಂದೊಂದೇ ಬೆರಳನ್ನದ್ದಿ ಬೆಳ್ಳನೆಯ ಗೋಡೆಯ ಮೇಲೆ ಮುದ್ರೆಯೊತ್ತುತ್ತಾನೆ. ಮಗುವಿಗೆ ಮೊಲೆ ಕೊಡುವಾಗಲೆಲ್ಲ ನನ್ನ ಮುಂದೊಂದು ಖಾಲಿ ಒಳಲೆಯಿಟ್ಟುಕೊಂಡು ಅದನ್ನೇ ದಿಟ್ಟಿಸುತ್ತ ಕೂಡುತ್ತಾನೆ. ನಿಂಗೊತ್ತಿಲ್ಲ. ಆತ ನನ್ನನ್ನು ಪ್ರತಿಕ್ಷಣವೂ, ಪ್ರತಿ ಅಣುವೂ ಕಾಯುತ್ತಾನೆ. ನಂಗೆ ಹೆದರಿಕೆಯಾಗುತ್ತೆ!' ಅವಳ ಧ್ವನಿಯಲ್ಲಿ ಏರಿಳಿತಗಳಿರಲಿಲ್ಲ, ಉಮ್ಮಳಿಕೆಯಿರಲಿಲ್ಲ.

'ಈಗ, ಹ್ಯಾಗೆ ಬಂದೆ ಕಣ್ತಪ್ಪಿಸಿ?'

'ಹೊಟ್ಟೆ ನೋವು ಅಂದೆ! ಜ್ವರವೆಂದೆ. ಬಸಿರು ಅಂದೆ. ತಾಯಿ ಮನೆಗೆ ಹೋಗಬೇಕೆಂದು ಕನವರಿಸಿದೆ.